# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
# ಚಿಕ್ಕೋಡಿ

| | |
|---|---|
| ಓ ಎಸ್ ನಂ | 110/2024 |
| | ಸಿ.ಡಬ್ಲ್ಯೂ-1 |
| ದಿನಾಂಕ | 05-02-2026 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರನ ಹೆಸರು | ಪ್ರವೀಣ ಮುಂಜೆ |
| ತಂದೆಯ ಹೆಸರು | ಶಿವಾಜಿ |
| ವಯಸ್ಸು | 32 ವರ್ಷ |
| ಕೆಲಸ | ಸರಕಾರಿ ಪರವಾಣಿಗೆ ಭೂ ಮಾಪಕರು |
| ವಾಸ | ಚಿಕ್ಕೋಡಿ |

ಮುಖ್ಯ ವಿಚಾರಣೆಃ

1) ಪ್ರಸ್ತುತ ದಾವೆಯಲ್ಲಿ ದಾವಾ ಆಸ್ತಿ ಅಳತೆ ಮಾಡಲು ನನಗೆ ಆದೇಶ ಮಾಡಿದ್ದರಿಂದ ನಾನು ಉಭಯ ಪಕ್ಷಗಾರರಿಗೆ ನೋಟೀಸು ಜಾರಿ ಮಾಡಿ ದಿಃ16.03.2023 ರಂದು ದಾವಾ ಆಸ್ತಿಯನ್ನು ಅಳತೆ ಮಾಡಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ತಾವು ತಯಾರಿಸಿದ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ ಕೆ ಬಿ ವಕೀಲರಿಂದಃ**

ಹದ್ದು ಬಸ್ತ ಅಳತೆ ಮಾಡಲು ಉಭಯ ಪಕ್ಷಗಾರರಿಗೆ ನೋಟೀಸು ಜಾರಿ ಮಾಡಿರುತ್ತೇನೆ. ದಿಃ16.03.2023 ರಂದು ವಾದಿ ಮತ್ತು ಲಾಗೂ ಸರ್ವೆ ನಂಬರ 305 ರ ಜಮೀನಿನ ಮಾಲಿಕರು ಹಾಜರು ಇದ್ದರು. ಅವರ ಎಲ್ಲರ ಸಮಕ್ಷಮ ಅಳತೆ ಮಾಡಿರುತ್ತೇನೆ. ಸರ್ವೆ

ನಂಬರ 306/1 ರಲ್ಲಿರುವ  6 ಗುಂಟೆ 4 ಅಣೆ ಜಮೀನನ್ನು ಸರ್ವೆ ನಂಬರ 306/2 ರವರು ಅತಿ ಕ್ರಮಣ ಮಾಡಿದ್ದು ಕಂಡು ಬರುತ್ತದೆ. ಅದೇ ರೀತಿ ಸರ್ವೆ ನಂಬರ 306/1 ರಲ್ಲಿರುವ 6 ಅಣೆ ಜಮೀನನ್ನು ಸರ್ವೆ ನಂಬರ 305 ರವರು ಅತಿ ಕ್ರಮಣ ಮಾಡಿದ್ದು ಕಂಡು ಬರುತ್ತದೆ. ಸದರಿ ಅತಿ ಕ್ರಮಣ ಆಗಿರುವ ಬಗ್ಗೆ ನಿ ಪಿ 7 ರಲ್ಲಿ ನಮೂದು ಮಾಡಿರುತ್ತೇನೆ. ನಿ ಪಿ 7 ತಯಾರು ಮಾಡುವ ಪೂರ್ವದಲ್ಲಿ ಮೂಲ ನಕಾಶೆಯನ್ನು ತಾಳೆ ಮಾಡಿ ನಂತರ ಅಳತೆ ಮಾಡಿ ನಿ ಪಿ 7 ನ್ನು ತಯಾರು ಮಾಡಿರುತ್ತೇನೆ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಿ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ